# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ.

**ಸಿ.ಸಿ. ನಂ.ಃ 184/2012.**

| **ಫಿರ್ಯಾದುದಾರರು** | **ಆರೋಪಿತರು** |
|---|---|
| ಸರಕಾರದ ಪರವಾಗಿ ಅಬಕಾರಿ ಉಪ ನಿರೀಕ್ಷಕರು ಅನಮೋಡ | ವಿಕ್ರಮಸಿಂಗ್ ನಾನೊಸಿಂಗ್ ದೊಡಿಯಾ ಮತ್ತು ಇನ್ನೊಬ್ಬರು |

## ದೋಷಾರೋಪಣೆ

ನಾನು ಶ್ರೀ ವೇದಮೂರ್ತಿ ಬಿ ಎಸ್, ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಅಂದರೆ ಃ

1. ವಿಕ್ರಮಸಿಂಗ್ ನಾನೊಸಿಂಗ್ ದೊಡಿಯಾ<br>೩೦ ವರ್ಷ , ಸಾ ಃ ಲಕ್ಷ್ಮೀ ನಗರ<br>ರಾಜಕೋಟ, ಗುಜರಾತ
೨. ವಿಕ್ರಮಬಾಯಿ ಬಾನುಬಾಯಿ ಚಾವಡ<br>ಮಿಲನ್ ಹಾಲ್ ಎದುರುಗಡೆ<br>ಸ್ಟ್ರೀಟ ನಂ 2, ರಾಜಕೋಟ

ನಿಮ್ಮ ವಿರುದ್ದ ಮಾಡುವ ದೋಷಾರೋಪಣೆ ಇಂತಿದೆ ಃ

ದಿನಾಂಕಃ 23-09-2011 ರಾತ್ರಿ ೮-೩೦ ಗಂಟೆ ಸಮಯದಲ್ಲಿ ನಿಮ್ಮ ಪೈಕಿ 1 ನೇ ಆರೋಪಿ ಅನಧಿಕೃತವಾಗಿ ಯಾವುದೇ ಪಾಸ ವ ಪರ್ಮಿಟ ಇಲ್ಲದೇ ಕಳ್ಳಾಟಿಕೆಯಿಂದ ವಾಹನ ಸಂಖ್ಯೆ ಃ ಜಿಜೆ 03 - ಎಟಿ 4572 ರಲ್ಲಿ 21 ಮದ್ಯದ ಪೆಟ್ಟಿಗೆಗಳು-189.000 ಲೀಟರ್ಸ ಮದ್ಯದ ಬಾಟಲಿಗಳನ್ನು ವಾಹನದಲ್ಲಿ ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ಸ್ವಾಧೀನದಲ್ಲಿಟ್ಟುಕೊಂಡು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 15 ನ್ನು ಉಲ್ಲಂಘನೆ ಮಾಡಿ ಸದರಿ ಕಾಯ್ದೆಯ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು ಅಕ್ರಮವಾಗಿ 21 ಮದ್ಯದ ಪೆಟ್ಟಿಗೆಗಳು - ಸುಮಾರು 189.000 ಲೀಟರ್ಸ ಮದ್ಯದ ಬಾಟಲಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತಿರಿ.

ಮೂರನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ೧ ನೇ ಆರೋಪಿ ಯಾವುದೇ ಪರವಾನಿಗೆ ಇಲ್ಲದೇ ಸಾಗಾಟ ಮಾಡುತ್ತಿದ್ದ ವಾಹನ ನಿಮ್ಮ ಪೈಕಿ ೨ ನೇ ಆರೋಪಿಯ ಮಾಲಿಕತ್ವಕ್ಕೆ ಸೇರಿದ್ದು ಆಗಿರುವುದರಿಂದ ೨ ನೇ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 43(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತಿರಿ

ಮೇಲಿನ ಅಪರಾಧಗಳನ್ನು ಈ ನ್ಯಾಯಾಲಯವು ನಿಮ್ಮ ವಿರುದ್ಧ ವಿಚಾರಣೆಗೆ ಕೈಗೊಳ್ಳುತ್ತದೆ ಅಂತಾ ನಾನು ಈ ಮೂಲಕ ನಿಮಗೆ ನಿರ್ದೇಶನ ನೀಡಿರುತ್ತೇನೆ.

ದಾಂಡೇಲಿ.<br>ದಿನಾಂಕಃ - -2014.

ಪ್ರ. ದ. ನ್ಯಾ. ದಂಡಾಧಿಕಾರಿಗಳು,<br>ದಾಂಡೇಲಿ.

ಪ್ರಶ್ನೆ 1 ಃ ಈಗ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ **?**

ಉತ್ತರ ಃ

ಪ್ರಶ್ನೆ 2ಃ ನೀವು ಈ ಮೇಲಿನ ಅಪರಾಧವನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಕೇಳಿಕೊಳ್ಳುತ್ತಿರೋ **?**

ಉತ್ತರ ಃ

**(**ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಅವನ ಭಾಷೆಯಲ್ಲಿ ಓದಿ ಹೇಳಿ, ಆರೋಪಿತನು ನೀಡಿರುವ ಉತ್ತರವನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ ಮತ್ತು ಅದು ಸರಿ ಇರುತ್ತದೆ ಅಂತಾ ಈ ಮೂಲಕ ದೃಢೀಕರಿಸಿರುತ್ತೇನೆ**)**

( ಭಾಮಿನಿ )

ದಾಂಡೇಲಿ. ಪ್ರ. ದ. ನ್ಯಾ. ದಂಡಾಧಿಕಾರಿಗಳು,

ದಿನಾಂಕಃ - -2014. ದಾಂಡೇಲಿ.